

# ವಿಶ್ವದ ಶ್ವಾಸಕೋಶಕ್ಕೆ ಬೆಂಕಿ

**ಅಮೆಜಾನ್ ಮಳೆಕಾಡುಗಳಲ್ಲಿ ಮತ್ತೆ ಮತ್ತೆ ಕಾಳ್ಗಿಚ್ಚು ಕಾಣಿಸಿಕೊಳ್ಳುತ್ತಿದೆ. ಬ್ರೆಜಿಲ್ ಅಗ್ನಿಕುಂಡದ ಧಗೆ ಭೂಮಂಡಲವನ್ನೆಲ್ಲ ಬೆಚ್ಚಿಬೀಳುವಷ್ಟು ಘಾತಕವಾದುದು.**

■ ಎ. ರಾಮು

ಅಮೆಜಾನ್ ಮಳೆಕಾಡುಗಳಿಗೆ ಬೆಂಕಿ ಬಿದ್ದಿದೆ. ಬ್ರೆಜಿಲ್‌ನಲ್ಲಿ ಕುದಿ ಕುಲುಮೆಯಂಥ ಸ್ಥಿತಿ. ಎಲ್ಲೋ ದೂರದ ಬ್ರೆಜಿಲ್‌ನಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡರೆ ಅಲ್ಲಿನ ಜನ ಮಾತ್ರವಲ್ಲ – ಇಡೀ ವಿಶ್ವವೇ ಬೆಚ್ಚಿಬೀಳುತ್ತದೆ. ಜಾಗತಿಕ ಪರಿಸರವನ್ನು ಸಮತೋಲನದಲ್ಲಿ ಇಡುವಲ್ಲಿ ಅಮೆಜಾನ್ ಮಳೆಕಾಡುಗಳ ಪಾತ್ರ ಮುಖ್ಯವಾದುದು. ಆ ಕಾರಣದಿಂದಲೇ ಅಲ್ಲಿ ಬೀಳುವ ಬೆಂಕಿಯ ಬಿಸಿ ಇಡೀ ವಿಶ್ವಕ್ಕೆ ತಾಗುತ್ತದೆ.

ಅಮೆಜಾನ್ ಕಾಡುಗಳಲ್ಲಿನ ಕಿಚ್ಚಿಗೆ ಕಾರಣವೇನು? ಒಣಹವೆ, ಬಿಸಿಗಾಳಿ ಮತ್ತು ಧಗೆ ಎನ್ನುವುದು ಬ್ರೆಜಿಲ್‌ನ ಪರಿಸರ ಸಚಿವ ರಿಕಾರ್ಡೊ ಸಲ್ಲೆಸ್ ನೀಡಿರುವ ಹೇಳಿಕೆ. ‘ಉಹುಂ, ಇದು ಪ್ರಾಕೃತಿಕ ವಿಕೋಪವಲ್ಲ, ಮಾನವಕೃತ ದುರಂತ’ ಎನ್ನುವುದು ಪರಿಸರತಜ್ಞರ ಟಿಪ್ಪಣಿ.

ಕಾಡೆಂದ ಮೇಲೆ ಕಾಳ್ಗಿಚ್ಚು ಸಹಜ. ನಮ್ಮ ಬಂಡೀಪುರ, ನಾಗರಹೊಳೆ ಕಾಡುಗಳಲ್ಲಿ ಬೆಂಕಿ ಬೀಳುವಂತೆ ಅಮೆಜಾನ್ ಕಾಡುಗಳಲ್ಲೂ ಪ್ರತಿ ವರ್ಷ ಕಿಚ್ಚು ಕಾಣಿಸಿಕೊಳ್ಳುತ್ತದೆ, ಮರಗಿಡಗಳೊಂದಿಗೆ ಜೀವಪ್ರಭೇದಗಳು ದಹಿಸಿಹೋಗುತ್ತವೆ. ಆದರೆ, ಈ ಬಾರಿ ಕಾಣಿಸಿಕೊಂಡಿರುವ ಕಾಳ್ಗಿಚ್ಚು ಅತ್ಯಂತ ಭೀಕರವಾದುದು. ಕಳೆದೊಂದು ದಶಕದಲ್ಲೇ ಅತ್ಯಂತ ಭೀಕರವಾದ ಕಿಚ್ಚಿದು. ಆ ಕಾರಣದಿಂದಲೇ ಇಡೀ ವಿಶ್ವ ಅಮೆಜಾನ್ ಕಾಡುಗಳು ಉರಿಯುತ್ತಿರುವುದನ್ನು ಆತಂಕದಿಂದ ನೋಡುತ್ತಿದೆ.

ಹಾಗೆನೋಡಿದರೆ ಅಮೆಜಾನ್ ಕಾಡುಗಳು ಬೆಂಕಿ ನಿರೋಧಕ ಶಕ್ತಿಗೆ ಪ್ರಸಿದ್ಧವಾದವು. ಅಲ್ಲಿನ ಸಹಜ ತಂಪುಹವೆ ಕಿಚ್ಚನ್ನು ತಡೆಗಟ್ಟುವ ಶಕ್ತಿಯನ್ನು ಹೊಂದಿರುವಂತಹದ್ದು. ಆದರೆ, ಯಾವಾಗ ಕಾಡಿನ ನಡುವೆ ಮನುಷ್ಯರ ಹೆಜ್ಜೆಗುರುತುಗಳು ಹೆಚ್ಚಾಗತೊಡಗಿದವೋ ಪ್ರಕೃತಿಯ ಗತಿಯೂ ಏರುಪೇರಾಗತೊಡಗಿತು.

ಬರಗಾಲಗಳು ಕೂಡ ಕಾಡಿನ ಚಹರೆಯನ್ನು ಬದಲಿಸಿದವು. ಅಭಿವೃದ್ಧಿಯ ಹೆಸರಲ್ಲಿ ಕಾಡು ಸವಕಳಿಯಾದಂತೆಲ್ಲ ವಿಕೋಪಗಳ ಸಂಖ್ಯೆಯೂ ಹೆಚ್ಚಾಗಿದೆ. 2019ರಲ್ಲಿಯೇ 39,194 ಬೆಂಕಿಯ ಪ್ರಕರಣಗಳು ವರದಿಯಾಗಿವೆ ಎನ್ನುತ್ತಿದೆ ಬ್ರೆಜಿಲ್‌ನ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯ ವರದಿ. ಅಂದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕಾಳ್ಗಿಚ್ಚಿನ ಪ್ರಕರಣಗಳ ಸಂಖ್ಯೆ ಶೇ. 77ರಷ್ಟು ಹೆಚ್ಚಾಗಿದೆ.

ಕಾಳ್ಗಿಚ್ಚು ನಂದಿಸಲು ಬ್ರೆಜಿಲ್ ಸರ್ಕಾರ ಹರಸಾಹಸ ಪಡುತ್ತಿದೆ. ಸ್ಥಳೀಯ ಬುಡಕಟ್ಟು ಜನರು ಗುಂಪುಗಳನ್ನು ಕಟ್ಟಿಕೊಂಡು ಬೆಂಕಿ ನಂದಿಸಲು ಶ್ರಮಿಸುತ್ತಿದ್ದಾರೆ. ‘ಪ್ರತಿ ಕ್ಷಣ ಕಾಡು ಸಾಯುವುದನ್ನು ನೋಡುವಾಗ ದುಃಖವಾಗುತ್ತದೆ’ ಎನ್ನುವ ಬುಡಕಟ್ಟು ಸಾಹಸಿಗರು, ಕಾಡನ್ನು ಉಳಿಸಲು ತಮ್ಮ ಕೈಲಾದ ಪ್ರಯತ್ನ ನಡೆಸುತ್ತಿದ್ದಾರೆ.

ಇಂದಲ್ಲ ನಾಳೆ ಕಾಳ್ಗಿಚ್ಚು ತಹಬಂದಿಗೆ ಬರುತ್ತದೆ. ಪ್ರಶ್ನೆ ಇವತ್ತಿಗೆ ಸಂಬಂಧಿಸಿದ್ದಲ್ಲ. ಕಾಡನ್ನು ಕಿಚ್ಚಿನಿಂದ ಕಾಪಾಡುವುದೆಂದರೆ, ಅಲ್ಲಿ ಮನುಷ್ಯರ ಹಸ್ತಕ್ಷೇಪ ಕಡಿಮೆಯಾಗಬೇಕು ಎಂದರ್ಥ. ಕಾಡನ್ನು ಅದರ ಪಾಡಿಗೆ ಬಿಟ್ಟರೆ, ಅದು ತಂತಾನೇ ತನ್ನ ರಕ್ಷಣಾವ್ಯವಸ್ಥೆಯನ್ನು ಬಲಪಡಿಸಿಕೊಳ್ಳುತ್ತದೆ. ಅಮೆಜಾನ್ ವಿಶ್ವದ ಪಾಲಿಗೆ ಶ್ವಾಸಕೋಶ ಇದ್ದಂತೆ. ಅದನ್ನು ರಕ್ಷಿಸಲು ಬ್ರೆಜಿಲ್ ಮೇಲೆ ವಿಶ್ವ ಸಮುದಾಯ ಒತ್ತಡ ಹೇರಬೇಕು. ಅಷ್ಟುಮಾತ್ರವಲ್ಲ, ಬ್ರೆಜಿಲ್‌ನ ಪರಿಸರ ಕಾಳಜಿಯ ಕ್ರಮಗಳಿಗೆ ಇಡೀ ವಿಶ್ವ ಒತ್ತಾಸೆಯಾಗಿ ನಿಲ್ಲಬೇಕು. ■